**ಓ.ಎಸ್ ನಂಃ 250/2020** **ಪಿ.ಡಬ್ಲ್ಯೂ-1**

**<u>ದಿನಾಂಕಃ 05-12-2025 ರಂದು ಪ್ರಮಾಣ ವಚನವನ್ನು ಬೋಧಿಸಲಾಯಿತು.</u>**
**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎಸ್ ವಿ ವಕೀಲರಿಂದಃ</u>**

ನ್ಯಾಯಾಲಯಕ್ಕೆ ಮುಖ್ಯ ವಿಚಾರಣೆ ಪ್ರಮಾಣ ಪತ್ರ ನಾನೇ ಹೇಳಿ ಮಾಡಿಸಿರುತ್ತೇನೆ. ನನಗೆ ಗೋಪಾಲರೆಡ್ಡಿ ರವರು ತಾಲ್ಲೂಕು ಕಛೇರಿಗೆ ಬರುತ್ತಿದ್ದರಿಂದ ನನಗೆ ಪರಿಚಯ ಆಗಿರುತ್ತಾರೆ. ನಾನು ಜೇರಾಕ್ಸ ಅಂಗಡಿ ಮತ್ತು ಡಿ ಟಿ ಪಿ ಕೆಲಸ ಮಾಡುತ್ತಿದ್ದೇನೆ. ನಾನು ಸದರಿ ಕೆಲಸ ಈಗ 15 ವರ್ಷಗಳಿಂದ ಮಾಡುತ್ತಿದ್ದೇನೆ. ಗೋಪಾಲರೆಡ್ಡಿ ರವರು ನನಗೆ 10 ವರ್ಷಗಳಿಂದ ಪರಿಚಯ. ನಾನು ಮತ್ತು ಗೋಪಾಲರೆಡ್ಡಿ 2 ರಿಂದ 3 ವ್ಯವಹಾರಗಳು ಮಾಡಿರುತ್ತೇವೆ. ವಾದಿ 1(ಎ) ವಾಸಂತಿ ರವರು ವ್ಯವಹಾರ ಆಗುವ ಸಮಯದಲ್ಲಿ ಬಂದಿದ್ದರು ಅವರು ನನಗೆ ಪರಿಚಯ ಆಗಿರುತ್ತಾರೆ. ಪ್ರತಿವಾದಿ ದಾವೆಯ ಅಂಗ್ರಿಮೆಂಟ್ ಆಗುವಾಗ ಬಂದಿರುವುದರಿಂದ ನನಗೆ ಅವರ ಪರಿಚಯ ಇರುತ್ತದೆ. ದಿಃ- 13.06.2019 ರಂದು ನನಗೆ ಪ್ರತಿವಾದಿ ಪರಿಚಯ ಆಗಿರುತ್ತದೆ. ನನಗೆ ವಾದಿ ಮತ್ತು ಪ್ರತಿವಾದಿ ಇಬ್ಬರು ಅಂಗ್ರಿಮೆಂಟ್‌ಗೆ ಸಹಿ ಹಾಕಲು ಹೇಳಿರುತ್ತಾರೆ. ಪ್ರತಿವಾದಿ ವಾದಿಗೆ ಕ್ರಯ ಪತ್ರ ಬರೆದು ಕೊಡುತ್ತೇನೆಂದು ಅಗ್ರಿಮೆಂಟ್ ಬರೆದು ಕೊಟ್ಟಿದ್ದು ಅಗ್ರಿಮೆಂಟ್ ಪ್ರಕಾರ ಪ್ರತಿವಾದಿ ಕ್ರಯಪತ್ರ ಬರೆದು ಕೊಡುವಂತೆ ಈ ದಾವೆ ಸಲ್ಲಿಸಿರುತ್ತಾರೆ. ಸಾಕ್ಷಿದಾರ ಬಾಲಾಜಿ ಪ್ರತಿವಾದಿಯ ಜೊತೆ ದಿಃ- 13.06.2019 ರಂದು ಬಂದಿದ್ದರು. ನನಗೆ ಮತ್ತು ಬಾಲಾಜಿಗೆ ದಿಃ- 13.06.2019 ರವರೆಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ದಾವಾ ಸ್ವತ್ತು ಸರ್ವೆ ನಂಬರ 130/5 ರಲ್ಲಿ ಆರು ವರೆ ಗುಂಟೆ, ಸರ್ವೆ ನಂ.130/6 ರಲ್ಲಿ 18 ಗುಂಟೆ, ಸರ್ವೆ ನಂ.132/23 ರಲ್ಲಿ 17 ವರೆ ಗುಂಟೆ ಇರುತ್ತದೆ. ನಾನು ದಾವಾ ಸ್ವತ್ತಿಗೆ ಒಂದು ವಾರದ ಮುಂಚೆ ಹೋಗಿದ್ದೆ. ದಾವಾ ಸ್ವತ್ತಿಗೆ ನಾನು, ಗೋಪಾಲರೆಡ್ಡಿ, ರಾಜಕುಮಾರ, ಬಾಲಾಜಿ, ಹೋಗಿರುತ್ತೇವೆ. ನಮಗೆ ರಾಜಕುಮಾರ ದಾವಾ ಸ್ವತ್ತಿಗೆ ಒಂದು ವಾರದ ಮುಂಚೆ ಕರೆದುಕೊಂಡು ಹೋಗಿರುತ್ತಾರೆ. ಅದೇ ದಿನ ನಾವು ಮಾತುಕತೆ ಮಾಡಿರುತ್ತೇವೆ. ನನಗೆ ಹಣ ನೀಡುವುದಿದೆ ಎಂದು ವಾದಿ ಮತ್ತು ಪ್ರತಿವಾದಿ ಇಬ್ಬರು ಕರೆದಿರುತ್ತಾರೆ. ಪ್ರತಿವಾದಿ ಮೊದಲಿಗೆ ಹಣ ಪಡೆದು ನಂತರ ದಾವಾ ಸ್ವತ್ತು ತೋರಿಸಿರುತ್ತಾರೆ ಯಾವದಿನ ಪ್ರತಿವಾದಿ ವಾದಿಯಿಂದ ಹಣ

ಪಡೆದಿದ್ದಾರೆಂದು ನನಗೆ ದಿನಾಂಕ ನೆನಪಿಲ್ಲ. ಆ ದಿನ ನಾನು ಹೋಗಿದ್ದೆ. ಪ್ರತಿವಾದಿ ವಾದಿ ಇಂದ ಹಣ ಪಡೆಯುವ ಸಮಯದಲ್ಲಿ ನಾವು ಮೇಲೆ ಹೇಳಿದ 5 ಜನ ಹಾಜರು ಇದ್ದೇವು. ನಗದು ರೂಪದಲ್ಲಿ ರೂ.14,50,000/- ವಾದಿ ಪ್ರತಿವಾದಿಗೆ ನೀಡಿರುತ್ತಾರೆ. ಹಣದ ಮುಖಬೆಲೆ ರೂ.500/- ಆಗಿತ್ತು. ಕವರಿನಲ್ಲಿ ಹಣ ತೆಗೆದುಕೊಂಡು ಹೋಗಿರುತ್ತಾರೆ. ನಾನು ವಾಸಂತಿ ರವರ ಮಾತು ಕೇಳಿ ನ್ಯಾಯಾಲಯಕ್ಕೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ.ಕೇ. ಹೇ. ಸರಿ ಇದೆ.
ಸಹಿ/-
**(ದಯಾನಂದ)**
**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಲೂರು.**